☎ Ph : 2768 3377

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

ಸಂ.ಬಿಐಎಎಪಿಎ/ಟಿಪಿ/ಎಲ್‌ಎಒ/09/2016-17/1694 ದಿನಾಂಕ: 20 NOV 2018

**<u>ವಸತಿ ವಿನ್ಯಾಸ ಅನುಮೋದನೆ ಅವಧಿಯ ನವೀಕರಣ ಪತ್ರ</u>**

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಸೌತೇಗೌಡನಹಳ್ಳಿ ಗ್ರಾಮದ ಸರ್ವೆ ನಂ. 2 ರಲ್ಲಿ [(2ಎ-09ಗು) ಮತ್ತು 04ಗುಂಟೆ 'ಎ' ಖರಾಬು] 3 ರಲ್ಲಿ (2ಎ-26ಗು) ಮತ್ತು 4 ರಲ್ಲಿ [(2ಎ) ಮತ್ತು 07ಗುಂಟೆ 'ಎ' ಖರಾಬು)] ಒಟ್ಟು 07ಎಕರೆ-06ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ 'ವಸತಿ' ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಲಾಗಿದ್ದು, ವಿನ್ಯಾಸಕ್ಕೆ ನೀಡಿರುವ ಅನುಮೋದನಾ ಅವಧಿಯನ್ನು ನವೀಕರಣ ಮಾಡುವ ಕುರಿತು.

ಉಲ್ಲೇಖ:
1. ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿ ಸಲ್ಲಿಸಿರುವ ಅರ್ಜಿ ಸಂಖ್ಯೆ 3214 ದಿನಾಂಕ: 16-05-2016.
2. ಪ್ರಾಧಿಕಾರದಿಂದ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಿರುವ ಸಮ ಸಂಖ್ಯೆಯ ಪತ್ರ ದಿನಾಂಕ: 24-08-2016.
3. ವಿನ್ಯಾಸ ಅನುಮೋದನೆ ಅವಧಿಯನ್ನು ನವೀಕರಿಸಲು ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 21-08-2018.
4. ಶುಲ್ಕ ಪಾವತಿಸಲು ತಿಳಿಸಿ ನೀಡಿರುವ ಪತ್ರ ದಿನಾಂಕ: 30-08-2018
5. ಶುಲ್ಕ ಪಾವತಿಸಿದ ರಶೀದಿ ನಂ. 9266 ದಿನಾಂಕ: 09-11-2018 ರೂ. 38,500/- (ರೂ. ಮೂವತ್ತೆಂಟು ಸಾವಿರದ ಐದು ನೂರು ರೂಪಾಯಿಗಳು ಮಾತ್ರ/-)

*********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಂತೆ **ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಸೌತೇಗೌಡನಹಳ್ಳಿ ಗ್ರಾಮದ ಸರ್ವೆ ನಂ. 2 ರಲ್ಲಿ [(2ಎ-09ಗು) ಮತ್ತು 04ಗುಂಟೆ 'ಎ' ಖರಾಬು], 3 ರಲ್ಲಿ (2ಎ-26ಗು) ಮತ್ತು 4 ರಲ್ಲಿ [(2ಎ) ಮತ್ತು 07ಗುಂಟೆ 'ಎ' ಖರಾಬು)] ಒಟ್ಟು <u>*07ಎಕರೆ-06ಗುಂಟೆ*</u>** ವಿಸ್ತೀರ್ಣದ ಜಮೀನಿನಲ್ಲಿ 'ವಸತಿ' ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಮೇರೆಗೆ, ಉಲ್ಲೇಖ (2) ರಂತೆ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (3) ರ ಮನವಿ ಪತ್ರದಲ್ಲಿ ಸದರಿ ವಿನ್ಯಾಸ ಅನುಮೋದನೆ ಅವಧಿಯನ್ನು ಒಂದು ವರ್ಷದ ಅವಧಿಗೆ ನವೀಕರಣಗೊಳಿಸಲು ಕೋರಿ ಮನವಿ ಹಾಗೂ ಅನುಮೋದಿತ ವಿನ್ಯಾಸ ನಕ್ಷೆ ನೀಲಿ ಪ್ರತಿಗಳನ್ನು ಸಲ್ಲಿಸಿದ್ದು, ಸದರಿ ಮನವಿಯ ಮೇರೆಗೆ ವಸತಿ ವಿನ್ಯಾಸ ನಕ್ಷೆಯ ಅನುಮೋದನೆ ಅವಧಿಯನ್ನು ಒಂದು ವರ್ಷದ ಅವಧಿಗೆ ನವೀಕರಿಸುವ ಸಂಬಂಧ ನಿಗಧಿತ ಶುಲ್ಕಗಳನ್ನು ಪಾವತಿಸಲು ತಿಳಿಸಿ ಉಲ್ಲೇಖ (4) ರಂತೆ ಪತ್ರ ಬರೆಯಲಾಗಿರುತ್ತದೆ. ಅದರಂತೆ ಉಲ್ಲೇಖ (5) ರಂತೆ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಆದ ಕಾರಣ, ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಿದ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ/ಎಲ್‌ಎಒ/09/2016-17 ದಿನಾಂಕ: 24-08-2016 ರಲ್ಲಿನ ನಿಬಂಧನೆಗಳೊಂದಿಗೆ ಹಾಗೂ ಈ ಕೆಳಕಂಡ ಇತರೆ ಷರತ್ತುಗಳನ್ನು ವಿಧಿಸಿ <u>ದಿನಾಂಕ: 24-08-2018 ರಿಂದ ದಿನಾಂಕ: 23-08-2019</u> ರವರೆಗೆ ವಿನ್ಯಾಸವನ್ನು ನವೀಕರಿಸಲಾಗಿದೆ.

d:\system-17\tp-3\layout renewal\layout renewal latest fomat.docx

1. ಪ್ರಾಧಿಕಾರ ನವೀಕರಿಸಿರುವ ಅನುಮೋದಿತ ವಿನ್ಯಾಸ ನಕ್ಷೆಯಂತೆ ಜಮೀನಿನಲ್ಲಿ ಕಾಮಗಾರಿಯನ್ನು ಶೀಘ್ರವಾಗಿ ನವೀಕರಣ ಕಾಲಾವಧಿ ಮುಗಿಯುವ ಮುನ್ನ ಅಭಿವೃದ್ಧಿಪಡಿಸತಕ್ಕದ್ದು.
2. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡಲಾಗುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
3. ವಿನ್ಯಾಸ ನವೀಕರಣ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆಯಲ್ಲಿನ ಮಾಹಿತಿಗಳು ಅಥವಾ ಬೇರೆ ಯಾವುದೇ ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ತಾನಾಗಿ ರದ್ದುಗೊಳ್ಳುತ್ತದೆ.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 17 (4) ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

20.11.2018

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

ಇವರಿಗೆ,

ಶ್ರೀ ಬಿ ಬಾಲಸುಂದರಮ್ ರೆಡ್ಡಿ ಬಿನ್ ಲೇ॥ ಐವಾರಪ್ಪ ರೆಡ್ಡಿ
ರವರ ಪರವಾಗಿ ಸ್ಪೆಷಿಲ್ ಪವರ್ ಆಫ್ ಅಟಾರ್ನಿ ಹೋಲ್ಡರ್
ಶ್ರೀ ಕೆ. ವೆಂಕಟಸುಬ್ರಮಣ್ಯಂರೆಡ್ಡಿ ಬಿನ್ ಲೇಟ್॥ ಕೆ. ರಂಗನಾಥರೆಡ್ಡಿ
C/o ಬೋಗನಂದೀಶ್ವರ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್,
ನಂ. 127, ಅರಳೇಪೇಟೆ, ವಿಜಯಪುರ ಟೌನ್,
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪ್ರತಿಯನ್ನು: 1. ಮುಖ್ಯಾಧಿಕಾರಿಗಳು, ಪುರಸಭೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಮಾಹಿತಿಗಾಗಿ ಸಲ್ಲಿಸಿದೆ.

2. ಕಛೇರಿ ಪ್ರತಿ